ಪ್ರಶ್ನೆ	ಉತ್ತರ
ಅ. ಪಶುಸಂಗೋಪನಾ ಇಲಾಖೆಯಿಂದ ಜಿಲ್ಲೆಯಲ್ಲಿ 2003–04 ಹಾಗೂ 2004–05ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳೇನು?	ಚಿಕಿತ್ಸೆ ತಳಿ ಅಭಿವೃದ್ಧಿ ಸೇವೆಗಳು, ರೋಗ ನಿರೋಧಕ ಚುಚ್ಚು ಮದ್ದು ಮತ್ತು ಜಂತು ನಾಶಕ ಔಷಧಿ ವಿತರಣೆ, ವಿಸ್ತರಣಾ ಚಟುವಟಿಕೆಗಳು ಸಂಚಾರಿ ಸೇವೆಗಳು, ರೋಗ ಪತ್ತೆ ಪ್ರಯೋಗಾಲಯ ಸೇವೆಗಳು, ಮೇವು ಅಭಿವೃದ್ಧಿ ಕುಕ್ಕುಟ ಮತ್ತು ಹೈನುಗಾರಿಕೆಯಲ್ಲಿ ರೈತರಿಗೆ ತರಬೇತಿ, ಇತ್ಯಾದಿಗಳ ಜೊತೆಯಲ್ಲಿ ಕೆಳಕಂಡ ಕಾರ್ಯಕ್ರಮಗಳು ಅನುಷ್ಠಾನಗೊಳಿಸಲಾಗುತ್ತಿದೆ. 1. ಪಶುವೈದ್ಯಕೀಯ ಸಂಸ್ಥೆಗಳ ಕಟ್ಟಡ ನಿರ್ಮಾಣ ಮತ್ತು ದುರಸ್ತಿ 2. ಔಷಧಗಳ, ರಾಸಾಯನಿಕಗಳು ಮತ್ತು ಸಾಮಗ್ರಿಗಳ ಖರೀದಿ ಮತ್ತು ವಿತರಣೆ. 3. ದ್ರವಸಾರಜನಕ, ಘನೀಕೃತವೀರ್ಯ ಸರಬರಾಜು ಮತ್ತು ಕೃತಕ ಗರ್ಭದಾರಣೆ ಸಲಕರಣೆ ಇತ್ಯಾದಿಗಳ ಸರಬರಾಜು 4. ಮುಧೋಳ್ ತಳಿ ನಾಯಿಯ ಸಂರಕ್ಷಣೆ ಹಾಗೂ ಅಭಿವೃದ್ಧಿ 5. ಬರಡು ರಾಸು/ಆರೋಗ್ಯ ಶಿಬಿರಗಳ ಏರ್ಪಾಡು 6. ಗಿರಿರಾಜ ಕೋಳಿಗಳ ವಿತರಣೆ 7. ಸಾಮಾಜಿಕ– ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನ

ಪ್ರಶ್ನೆ	ಉತ್ತರ
ಆ. ಅವುಗಳಲ್ಲಿ ವೆಚ್ಚಮಾಡಿದ ಹಣದ ಮೊತ್ತ ಎಷ್ಟು?	ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.
ಇ. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಜಾನುವಾರು ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಲು ಸರ್ಕಾರ ಮುಂದಾಗುವುದೇ?	ಹೆಸರುವಾಸಿಯಾದ ಖಿಲಾರಿ ತಳಿ ದನ ಮತ್ತು ಮುದೋಳ ತಳಿ ನಾಯಿಯನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಲು ಮತ್ತು ಸುಧಾರಿತ ಎಮ್ಮೆಗಳ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಸಮಯದಲ್ಲಿ 2/3 ರಷ್ಟು ಭಾಗ ದಷ್ಟು ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಒದಗಿಸಲಾಗಿದೆ. ಪಶುಪಾಲನಾ ಚಟುವಟಿಕೆಗೆ ಡಾ.ನಂಜುಂಡಪ್ಪ ಸಮಿತಿಯ ಪ್ರಾದೇಶಿಕ ಅಸಮತೋಲನ ವರದಿಯಲ್ಲಿ ಗುರುತಿಸಲಾಗಿರುವ 39 ಅತಿ ಹಿಂದುಳಿದ ತಾಲ್ಲೂಕಿನಲ್ಲಿ 69 ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಲು ಪರಿಶೀಲಿಸಲಾಗುತ್ತಿದೆ. ಉತ್ತರ ಕರ್ನಾಟಕ ಭಾಗದ ಹೈನು ರಾಸುಗಳ ತಳಿ ಅಭಿವೃದ್ಧಿಗಾಗಿ, ಕೊಪ್ಪಳ ಜಿಲ್ಲೆಯ ಮುನಿರಾಬಾದ್ ನಲ್ಲಿರುವ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರ ಮತ್ತು ಧಾರವಾಡದಲ್ಲಿರುವ ಘನೀಕೃತ ವೀರ್ಯ ಉತ್ಪಾ ದನಾ ಕೇಂದ್ರಗಳನ್ನು ಉತ್ತಮ ಮತ್ತು ಅತ್ಯಾಧುನಿಕ ಉಪಕರಣಗಳನ್ನು (ಮೊಗ್ರಾಮಬಲ್ ಜೆಟ್ ಪ್ರಿಂಟರ್ ಮತ್ತು ಬಯೋಫ್ರೀಝರ್) ಹಾಗೂ ಹೋರಿಗಳನ್ನು ಪೂರೈಸಿ ಹೆಚ್ಚಿನ ಸಂಖ್ಯೆಯ ಉತ್ತಮ ಗುಣಮಟ್ಟದ ಘನೀಕೃತ ವೀರ್ಯವನ್ನು ಉತ್ಪಾದಿಸಿ ಸರಬರಾಜು ಮಾಡುವಂತೆ ರೂ.35.00 ಲಕ್ಷಗಳ ವೆಚ್ಚದಲ್ಲಿ ಬಲ ಪಡಿಸಲಾಗಿದೆ. ಇದರಿಂದಾಗಿ ಈ ವಿಭಾಗದ ಜಾನುವಾರುಗಳಲ್ಲಿ ಉತ್ತಮ ಹಾಲು ಇಳುವರಿ ನೀಡ ಬಲ್ಲಂತಹ ಸಂತತಿಗಳನ್ನು ಪಡೆಯಲು ಸಾಧ್ಯವಾಗಿದೆ.

ಪ್ರಶ್ನೆ	ಉತ್ತರ
	ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ 600 ಕೃತಕ ಗರ್ಭದಾರಣಾ ಕಾರ್ಯಕರ್ತರುಗಳಿಗೆ ಉನ್ನತ ತರಬೇತಿಯನ್ನು ರೂ.6.00 ಲಕ್ಷಗಳ ವೆಚ್ಚದಲ್ಲಿ ಕಳೆದ ಸಾಲಿನಲ್ಲಿ ನೀಡಲಾಗಿದ್ದು, ಇವರಿಂದ ಜಾನುವಾರು ಅಭಿವೃದ್ಧಿ ಪರಿಣಿತ ಸೇವೆಯು ದೊರಕುವಂತೆ ಮಾಡಲಾಗಿದೆ. ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕೃತಕ ಗರ್ಭಧಾರಣಾ ಕೇಂದ್ರಗಳಿಗೆ 2003–04 ಮತ್ತು 2004–05 ಸಾಲಿನಲ್ಲಿ 3 ಲೀಟರ್ ಅಳತೆಯ 1265 ದ್ರವಸಾರಜನಕ ಜಾಡಿಗಳನ್ನು, 34 ಲೀಟರ್ ಅಳತೆಯ 424 ಕಂಟೈನರ್‌ಗಳನ್ನು, 50 ಲೀಟರ್ ಅಳತೆಯ 352 ದ್ರವಸಾರಜನಕ ಶೇಖರಣಾ ಕಂಟೈನರ್‌ಗಳನ್ನು ಮತ್ತು 500 ಲೀಟರ್ ಅಳತೆಯ 5 ದ್ರವಸಾರಜನಕ ಸಾಗಾಣಿಕಾ ಕಂಟೈನರ್‌ಗಳನ್ನು ಮತ್ತಿತರ ಸಲಕರಣೆಗಳನ್ನು ಒಟ್ಟು ರೂ.196.70 ಲಕ್ಷಗಳ ವೆಚ್ಚದಲ್ಲಿ ಒದಗಿಸಿ ರೈತನ ಮನೆಬಾಗಿಲಿನಲ್ಲಿ ಸೇವೆ ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರಿಂದಾಗಿ ಹೆಚ್ಚು ಸಂಖ್ಯೆಯ ದನ ಮತ್ತು ಎಮ್ಮೆಗಳನ್ನು ಕೃತಕ ಗರ್ಭಧಾರಣೆಗೆ ಒಳಪಡಿಸಿ ಉತ್ತಮ ಹಾಲು ಹಿಂಡುವ ತಳಿ ಸಂತತಿಗಳನ್ನು ಉತ್ಪಾದಿಸಲು ಸಹಕಾರಿಯಾಗಿದೆ. 2004–05 ಸಾಲಿನಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕೃತಕ ಗರ್ಭಧಾರಣೆಯ ಬಗ್ಗೆ ಉತ್ತಮ ಅರಿವು ನೀಡುವ ಸಲುವಾಗಿ ಒಟ್ಟು 115 ರೈತ ತರಬೇತಿ ಶಿಬಿರಗಳನ್ನು ನಡೆಸಲಾಯಿತು. ಇದರಲ್ಲಿ ಸುಮಾರು 20,000 ಜನ ರೈತರಿಗೆ ರೂ. 11.50 ಲಕ್ಷಗಳ ವೆಚ್ಚದಲ್ಲಿ ಮಾಹಿತಿ ಒದಗಿಸಲಾಗಿದೆ.

ಪ್ರಶ್ನೆ	ಉತ್ತರ
	ಇದೇ ಸಾಲಿನಲ್ಲಿ ಇಂತಹದೇ 135 ಕ್ಯಾಂಪುಗಳನ್ನು ನಡೆಸಿ ಸುಮಾರು 25,000 ರೈತ ಮತ್ತು ರೈತ ಮಹಿಳೆಯರಿಗೆ ಅರಿವು ಮೂಡಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿನ ಬಂಜೆರಾಸುಗಳನ್ನು ಗುರುತಿಸಿ ತಜ್ಞರಿಂದ ಚಿಕಿತ್ಸೆ ನೀಡುವ ಒಟ್ಟು 115 ಚಿಕಿತ್ಸಾ ಶಿಬಿರಗಳನ್ನು ರೂ.11.50 ಲಕ್ಷಗಳ ವೆಚ್ಚದಲ್ಲಿ ಏರ್ಪಡಿಸಲಾಯಿತು. ಇದರಲ್ಲಿ ಸುಮಾರು 8000 ದನ ಮತ್ತು ಎಮ್ಮೆಗಳಿಗೆ ಚಿಕಿತ್ಸೆಯನ್ನು ನೀಡಲಾಗಿದೆ. ಇದೇ ಸಾಲಿನಲ್ಲಿ ಇಂತಹದೇ 135 ಕ್ಯಾಂಪುಗಳನ್ನು ರೂ.13.50 ಲಕ್ಷಗಳ ವೆಚ್ಚದಲ್ಲಿ ಏರ್ಪಡಿಸಿ ಬಂಜೆ ರಾಸುಗಳಿಗೆ ಚಿಕಿತ್ಸೆ ನೀಡಲಾಗಿದೆ.
ಈ. ಬರಗಾಲ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪಶು ಸಂಪತ್ತಿನ ರಕ್ಷಣೆಗಾಗಿ ಮೇವು ಸಾಗಾಣಿಕೆಗಾಗಿ ಔಷಧಿಗಳ ಖರೀದಿಗಾಗಿ ಮತ್ತಿತರ ಅವಶ್ಯಕ ಕಾರ್ಯಗಳಿಗಾಗಿ ಹೆಚ್ಚು ವರಿ ಅನುದಾನ ನೀಡಲು ಸರ್ಕಾರದ ಕ್ರಮಗಳೇನು?	ಬರಗಾಲ ಪರಿಸ್ಥಿತಿಯಲ್ಲಿ ಕಂದಾಯ ಇಲಾಖೆಯ ಬರಗಾಲ ಪರಿಹಾರ ನಿಧಿಯಿಂದ ಅನುದಾನವನ್ನು ಒದಗಿಸಿದೆ. ಪ್ರತಿ ಜಿಲ್ಲೆಗೆ ರೂ.5.00 ಲಕ್ಷದಂತೆ ಒಟ್ಟು 105 ಲಕ್ಷಗಳನ್ನು ಸಂಬಂಧಪಟ್ಟ ಬರಪೀಡಿತ 21 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಉಚಿತವಾಗಿ ನೀರಾವರಿ ಸೌಲಭ್ಯ ಹೊಂದಿರುವ ರೈತರಿಗೆ ಮೇವು ಬೀಜ ಕಿರುಪೊಟ್ಟಣ ಬೀಜಗಳನ್ನು ಒದಗಿಸಲು ಬಿಡುಗಡೆ ಮಾಡಿದೆ. ಮೇವು ಸಾಗಾಣಿಕೆ ಔಷಧಿಗಳ ಖರೀದಿಗೆ ಮತ್ತು ಇತರೆ ಅವಶ್ಯ ಕಾರ್ಯಕ್ರಮಗಳಿಗೆ ಸಿಆರ್‌ಎಫ್‌ನಿಂದ ಹೆಚ್ಚುವರಿ ವಂಟನ ಬಿಡುಗಡೆ ಮಾಡಲು ಕೋರಲಾಗುವುದು.

ಅನುಬಂಧ–1

ಪ್ರಶ್ನೆ ಸಂಖ್ಯೆ: 3343

ಕ್ರಮ ಸಂಖ್ಯೆ	ಕಾರ್ಯಕ್ರಮ	2003–04			2004–05		
		ನಿಗದಿಯಾದ ವಂಟನ	ಬಿಡುಗಡೆಯಾದ ವಂಟನ	ವೆಚ್ಚ ಮಾಡಲಾದ ವಂಟನ	ನಿಗದಿಯಾದ ವಂಟನ	ಬಿಡುಗಡೆಯಾದ ವಂಟನ	ವೆಚ್ಚ ಮಾಡಲಾದ ವಂಟನ
1.	ಕಚೇರಿಗಳ ನಿರ್ಮಾಣ ಮತ್ತು ದುರಸ್ತಿ	0.82	0.49	0.49	0.82	0.82	0.82
2.	ಔಷಧಿಗಳ, ರಾಸಾಯನಿಕಗಳು ಮತ್ತು ಸಾಮಗ್ರಿಗಳ ವಿತರಣೆ	7.5	4.5	4.5	10.25	10.25	10.25
3.	ದ್ರವಸಾರಜನಿಕ, ಘನಿಕೃತವೀರ್ಯ, ಕೃತಕ ಗರ್ಭಧಾರಣೆ ಸಲಕರಣೆ ವಿತರಣೆ.	2.28	2.28	2.28	0.00	0.00	0.00
4.	ಮುಧೋಳ್ ತಳಿ ನಾಯಿಯ ಸಂರಕ್ಷಣೆ ಹಾಗೂ ಅಭಿವೃದ್ಧಿ	0.35	0.23	0.23	0.00	0.00	0.00
5.	ಬರಡು/ಆರೋಗ್ಯ ಶಿಬಿರಗಳು	3.09	3.09	3.09	3.1	3.1	3.1

ಕ್ರಮ ಸಂಖ್ಯೆ	ಕಾರ್ಯಕ್ರಮ		2003–04			2004–05	
		ನಿಗದಿಯಾದ ಮಂಟನ	ಬಿಡುಗಡೆಯಾದ ಮಂಟನ	ಹೆಚ್ಚು ಮಾಡಲಾದ ಮಂಟನ	ನಿಗದಿಯಾದ ಮಂಟನ	ಬಿಡುಗಡೆಯಾದ ಮಂಟನ	ಹೆಚ್ಚು ಮಾಡಲಾದ ಮಂಟನ
6.	ನಿರಾಜ ಕೋಳಿಗಳ ಸುಧಾರಣೆ	0	0	0	0.21	0.21	0.21
7.	ಸಾಮಾಜಿಕ – ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನ						
	ಎ. ವಿಶೇಷ ಘಟಕ ಯೋಜನೆ	2.00	2.00	2.00	2.00	2.00	2.00
	ಬಿ. ಗಿರಿಜನ ಉಪ ಯೋಜನೆ	0.56	0.56	0.56	0.60	0.60	0.60

ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ:

ಮಾನ್ಯ ಅಧ್ಯಕ್ಷರೆ ಅವರು ಉತ್ತರ ಗಳನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ ಆ ಉತ್ತರಗಳು ಅಷ್ಟು ಸಮಾಧಾನ ಕರವಾಗಿಲ್ಲ. ಅನೇಕ ಕೆಲಸಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಪ್ರತಿ ಯೊಂದು ಹಳ್ಳಿಯಲ್ಲಿಯೂ ಕೂಡ ಆಸ್ಪ ತ್ರೆಯ ಅಭಾವವನ್ನು ನಾವು ಕಾಣು ತ್ತಿದ್ದೇವೆ. ನನ್ನ ಕ್ಷೇತ್ರದಲ್ಲಿ ಆಸ್ಪತ್ರೆಯ ಅಭಾವ ಬಹಳ ಇದೆ. ಆದಕಾರಣ ನಮ್ಮಲ್ಲಿ ಇನ್ನೂ ಕೆಲವು ಆಸ್ಪತ್ರೆಗಳನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಅದಕ್ಕಾಗಿ ನಾನು ಖುದ್ದಾಗಿ ಮಂತ್ರಿ ಗಳನ್ನು ಭೇಟಿ ಮಾಡಿ ಮನವಿ ಪತ್ರ ವನ್ನು ಕೊಟ್ಟಿದ್ದೇನೆ. ಇಂದು ದನಗಳ ಸಂಖ್ಯೆ ಕಡಿಮೆಯಾಗುತ್ತಿರುವಂಥ ಸಂದರ್ಭದಲ್ಲಿ ದನಗಳಿಗೇನಾದರೂ ರೋಗ ರುಜಿನಗಳು ಬಂದರೆ ಒಂದು ವಾರ, ಹದಿನೈದು ದಿವಸಗಳವರೆಗೂ ಅಲ್ಲಿ ಡಾಕ್ಟರ್‌ಗಳೇ ಬರುವುದಿಲ್ಲ. ಈಗಾ ಗಲೇ ಒಂದು ಸಂಚಾರಿ ಆಸ್ಪತ್ರೆ ಟೈಪ್ ಮಾಡಿದ್ದಾರೆ. ಆದರೆ ಅದರಿಂದ ಯಾವುದೇ ಉಪಯೋಗವಾಗುತ್ತಿಲ್ಲ.

ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ: ಅದಕ್ಕೆ ನಮ್ಮ ತಾಲ್ಲೂಕಿಗೆ ಕನಿಷ್ಠ 2ರಿಂದ 3 ಆಸ್ಪತ್ರೆಗಳನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಅದರಿಂದ ಅಲ್ಲಿರುವಂತಹ ರೈತರಿಗೆ ಅನುಕೂಲವಾಗುತ್ತದೆ ಮತ್ತು ದನಗಳಿಗೆ ಒಳ್ಳೆಯ ಆಸ್ಪತ್ರೆಯನ್ನು ಒದಗಿಸಿಕೊಟ್ಟ ಹಾಗೆ ಆಗುತ್ತದೆಂದು ಕೇಳುತ್ತಿದ್ದೇನೆ.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್: ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕಕ್ಕೆ ಭಾಗಕ್ಕೆ ಸುಮಾರು 3 ವರ್ಷದ ಹಿಂದೆ 390 ಪಿವಿಸಿ ಸೆಂಟರ್‌ನಿಂದ ಡಿಸ್ಪೆನ್ಸರಿ ಅಪ್‌ಗ್ರೆಡೇಷನ್ ಕೆಲಸ ಮಾಡಿಕೊಟ್ಟಿದ್ದೇವೆ. ಈ ವರ್ಷ ಕೂಡ 100 ಡಿಸೈನ್ಸ್ ಮಾಡಬೇಕೆಂದು ಪ್ರೋಗ್ರಾಂ ಇಟ್ಟುಕೊಂಡಿದ್ದೇವೆ. ಕೆಲವು ಕಡೆ ಮೊಬೈಲ್ ಸರ್ವೀಸ್ ಸರಿಯಾಗಿ ನಡೆಯುತ್ತಿಲ್ಲ ಕೆಲವು ಡಿಸ್ಟ್ರಿಕ್‌ಗಳಿಗೆ ನಾವು ಪರ್ಚೇಸ್ ಮಾಡಬೇಕೆಂದು ಜಿಲ್ಲಾ ಪರಿಷತ್ತು ಸಿಇಓ ಗಳಿಗೆ ಸಂಪರ್ಕ ಮಾಡಿದ್ದೇವೆ. ಇನ್ನು ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಇನ್ನೂ ಮೂರು ಆಸ್ಪತ್ರೆಗಳು ಅವರ ತಾಲ್ಲೂಕಿಗೆ ಹೊಸದಾಗಿ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಅವರು ಕೇಳಿದಂತೆ ಮೂರು ಆಸ್ಪತ್ರೆಗಳನ್ನು ಕೊಡುವುದಕ್ಕಾಗುವುದಿಲ್ಲ, ಒಂದು ಆಸ್ಪತ್ರೆ ಹೊಸದಾಗಿ ಅವರ ತಾಲ್ಲೂಕಿನಲ್ಲಿ ಈ ವರ್ಷ ಮಾಡಬೇಕೆಂದು ಮಾಡುತ್ತೇನೆ.

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ: ಮಾನ್ಯ ಅಧ್ಯಕ್ಷರೇ, ಒಂದು ಆಸ್ಪತ್ರೆ ಆಗುವುದಿಲ್ಲ, ಕನಿಷ್ಠ ಎರಡು ಆಸ್ಪತ್ರೆಗಳನ್ನು ಕೊಟ್ಟು, ಅದರ ಜೊತೆಗೆ ಸಂಚಾರಿ ವಾಹನದ ಸೌಲಭ್ಯವನ್ನಾದರೂ ವಿಸ್ತರಣೆ ಮಾಡಿಕೊಟ್ಟರೆ ನಮಗೆ ದಯವಿಟ್ಟು ಅನುಕೂಲವಾಗುತ್ತದೆ.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್: ಮಾನ್ಯ ಅಧ್ಯಕ್ಷರೆ, ಸಂಚಾರಿ ವಾಹನದ ವ್ಯವಸ್ಥೆ ಮಾಡಿಕೊಡುತ್ತೇವೆ. ಆದರೆ ಆಸ್ಪತ್ರೆ ವಿಚಾರದಲ್ಲಿ ಇಡೀ ರಾಜ್ಯಕ್ಕೆ 69 ಆಸ್ಪತ್ರೆಗಳನ್ನು ಕೊಡಬೇಕೆಂದು ಬಜೆಟ್‌ನಲ್ಲಿ ಕೊಟ್ಟಿದೆ. ಎಲ್ಲಾ ಕಡೆ ಮೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕುಗಳು ಯಾವ್ಯಾವುದು ಇದೆ ಅವುಗಳನ್ನೆಲ್ಲಾ ಕವರ್ ಮಾಡಿ ಮಾಡಬೇಕಾಗುತ್ತದೆ. ಅದಕ್ಕೆ ತಮ್ಮ ಕಡೆಗೆ ಒಂದು ಆಸ್ಪತ್ರೆ ಹಾಗೂ ಮೊಬೈಲ್ ಹಾಸ್ಪಿಟಲ್ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಚರಂತಿ ಮಠರವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಸಿದ್ದರಾಮಪ್ಪ ಕೂಬಾರವರು ಕೂಡ ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದರು. ಆದರೆ ಅವರು ಬಂದಿರಲಿಲ್ಲ. ಮಾನ್ಯ ಅಧ್ಯಕ್ಷರೆ ತಾವು ರೈತರು ನಾವು ರೈತರು. ಇವರು ಉತ್ತರ ಕೊಟ್ಟಿರುವುದು ಗಾಬರಿ ಹುಟ್ಟಿಸುವ ಹಾಗೆ ಇದೆ. ನಮ್ಮ ಪಶು ಸಂಪತ್ತು ಹೇಗೆ ನಾಶವಾಗುತ್ತದೆ ಎಂದರೆ ಹಳ್ಳಿಕಾರ್‌ಗಳ ಸಂಖ್ಯೆ 34,90,000 ಇದ್ದದ್ದು ಅದು 20,00,000 ಇಳಿದಿದೆ. ಅದೇ ರೀತಿ ಅಮೃತ್ ಮಹಲ್ 71,000 ಇದ್ದದ್ದೂ 69,000ಕ್ಕೆ ಇಳಿದಿದೆ. ಖಿಲಾರಿ 41 ಲಕ್ಷ ಇದ್ದದ್ದು 28 ಲಕ್ಷಕ್ಕೆ ಇಳಿದಿದೆ. ಹೀಗೆ ಆದರೆ ಇನ್ನೊಂದು ಹತ್ತಿಪ್ಪತ್ತು ವರ್ಷದಲ್ಲಿ ಪಶು ಸಂಪತ್ತು ನಾಶ ಆಗುತ್ತದೆಂದು ಉತ್ತರ ಹೇಳುತ್ತದೆ. ಆ ಕಾರಣದಿಂದ ಮಾನ್ಯ ಸಚಿವರನ್ನು ಕೇಳುತ್ತೇನೆ. ಇವರೂ ಕೂಡ ಕೇಳಿದ್ದಾರೆ. ಆದರೆ ಅದಕ್ಕೆ ಮಾನ್ಯ ಸಚಿವರು ಒತ್ತು ಕೊಡಲಿಲ್ಲ. ಆದರೂ ಕೂಡ ಪಶು ಸಂಪತ್ತು ರಕ್ಷಣೆಗೆ ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. ಇಲ್ಲಿ ಪಶು ರಕ್ಷಣೆಗೆ ಕೆಲವು ಯೋಜನೆಗಳನ್ನು ಹಾಕೊಂಡಿದ್ದಾರೆ. ಉದಾಹರಣೆಗೆ ಮುಧೋಳ ತಳಿನಾಯಿ, ಅದು ವಿಶಿಷ್ಟ ತಳಿಯ ನಾಯಿ, ಅದು ನಾಶವಾಗಿ ಹೋಯಿತು. ಅದರ ಬಗ್ಗೆ 2004-05ರಲ್ಲಿ ಅದರ ಸಂಖ್ಯೆ ಸೊನ್ನೆ. ಯಾವ ಅಭಿವೃದ್ಧಿನೂ ಏನೂ ಕಾರ್ಯಕ್ರಮ ಕೂಡ ಹಾಕಿಕೊಂಡಿಲ್ಲ. ಅದೇ ರೀತಿ ಎಲ್ಲಾ ತಳಿಗಳನ್ನು ತೆಗೆದುಕೊಂಡರೂ ಕೂಡ ಇವತ್ತು ಪಶು ಸಂಪತ್ತು ನಾಶವಾಗುತ್ತಿದೆ. ಆ ಪಶು ಸಂಪತ್ತು ಉಳಿಸಿಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಾವು ದಯವಿಟ್ಟು ಹೇಳಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂತಹ ಎಸ್.ಎಸ್.ಪಾಟೀಲ್‌ರವರು ಕೇಳಿದಂತಹ ಪ್ರಶ್ನೆಯನ್ನು ನಾನು ಒಪ್ಪುತ್ತೇನೆ. ಮೂರು ವರ್ಷಗಳಲ್ಲಿ ಸುಮಾರು 10ರಿಂದ 15 ಪರ್ಸೆಂಟ್ ಪಾಪ್ಯುಲೇಷನ್ ಸಂಖ್ಯೆ ಕಡಿಮೆ ಆಗಿದೆ. ಕಾರಣವೇನೆಂದರೆ ರಾಜ್ಯದಲ್ಲಿ ಬರಗಾಲ ಬಂದ ಕಾರಣ ಹಿಂದೆ ಮೂರ್ನಾಲ್ಕು ವರ್ಷಗಳಿಂದ ಕಡಿಮೆಯಾಗುತ್ತ ಬಂದಿದೆ. ಮೂರು ವರ್ಷಗಳಿಗೆ ಕಂಪೇರ್ ಮಾಡಿದರೆ ಹೋದವರ್ಷ ತೆಗೆದುಕೊಂಡರೆ, ಐದಾರು ತಿಂಗಳಲ್ಲಿ 3 ಪರ್ಸೆಂಟ್ ಇನ್‌ಕ್ರೀಜ್ ಆಗಿದೆ. ಅದಕ್ಕೆ ಕಾರಣ ಒಂದು ಬರಗಾಲ ಬಂದಿದ್ದು, ಇನ್ನೊಂದು ಎಷ್ಟು ಅವುಗಳಿಗೆ ಡ್ರಗ್ಸ್ ಬೇಕು ಅಷ್ಟು ಡ್ರಗ್ಸ್ ಕೊಡುವಂತಹ ವ್ಯವಸ್ಥೆ ನಮ್ಮ ಹತ್ತಿರ ಇರಲಿಲ್ಲ, ಉದಾಹರಣೆಗೆ ಲಾಸ್ಟ್ ಬಜೆಟ್‌ನಲ್ಲಿ 5 ಕೋಟಿ ರೂಪಾಯಿ ಬಜೆಟ್ ಅಮೌಂಟ್ ಡ್ರಗ್ಸ್‌ಗೆ ಕೊಟ್ಟಿದೆ.

ಟೋಟಲ್ ನಂಬರ್ ಆಫ್ ಅನಿಮಲ್ಸ್ ಇರುವುದು ಪರ್ ಹೆಡ್ ಡಿಸ್ಟ್ರಿಬ್ಯೂಟ್ ಮಾಡಿದರೆ ಒಂದು ರೂಪಾಯಿ ಕೂಡ ಬರುವುದಿಲ್ಲ. ನಮ್ಮ ರಿಕ್ವೇರ್‌ಮೆಂಟ್ 3.60ಪೈಸೆ ಇದೆ. ಆದರೆ ಈ ವರ್ಷ ಉಪಮುಖ್ಯಮಂತ್ರಿಗಳಿಗೆ ಹೇಳಿದ ಕಾರಣ ಅವರು 10 ಕೋಟಿ ರೂಪಾಯಿ ಮಾಡಿ ಹಿಂದಿನಿದಕ್ಕಿಂತ ಡಬಲ್ ಮಾಡಿದ್ದಾರೆ ಮತ್ತು ದಿನಾಂಕ: 1.04ರಿಂದ ವಾಕ್ಸಿನ್ ಫ್ರೀ ಆಫ್ ಕಾಸ್ಟ್ ಮಾಡಿದ್ದೇವೆ. ಮತ್ತು ಈ ಬಜೆಟ್‌ನಲ್ಲಿ ಫೂಟ್ ಅಂಡ್ ಮತ್ತು ಔಷಧವನ್ನು ಫ್ರೀ ಆಫ್ ಕಾಸ್ಟ್‌ನಲ್ಲಿ ಕೊಡಬೇಕೆಂದು ಮಾಡಿದ್ದೇವೆ. ಈ ರೀತಿಯಾಗಿ ಹೆಲ್ತ್ ಕ್ಯಾಂಪ್ ಮಾಡಬೇಕು ಹಾಗೂ ರೈತರಿಗೆ ಅವೇರ್ನೆಸ್‌ಗಾಗಿ ಟ್ರೇನಿಂಗ್ ಕೊಡಬೇಕು ಎಂದು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಇಂತಹ ಕಾರ್ಯಕ್ರಮಗಳನ್ನು ಹೆಚ್ಚು ಮಾಡಿ, ಏನು ಪಶು ಸಂಪತ್ತು ಕಡಿಮೆಯಾಗಿದೆ, ಅದನ್ನು ಉಳಿಸಿಕೊಳ್ಳಬೇಕೆಂದು ಬೇರೆ ಕಡೆ ಬ್ರೀಡಿಂಗ್ ಫಾರಂ, ಅಮೃತ್‌ಮಹಲ್, ದೇವನಿಕ್ಯಾಟ್ಲ್ ಬ್ರೀಡಿಂಗ್ ಫಾರಂ ಹಾಗೂ ಮುಧೋಳ್ ತಳಿ ಏನಿದೆ ಅದೆಲ್ಲಾ ನಾವು ಪ್ರಾರಂಭ ಮಾಡಿದ್ದೇವೆ. ಅದರ ಬಗ್ಗೆ ಇನ್ನು ಹೆಚ್ಚಿನ ಪ್ರಯತ್ನ ಮಾಡಿ, ಮಾನ್ಯ ಸದಸ್ಯರು ಹೇಳಿರುವುದನ್ನು ಗಮನದಲ್ಲಿಟ್ಟುಕೊಂಡು ನಾವು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಕೆಲವು ಪ್ರಮಾಣದಲ್ಲಿ ಅವರು ಹೇಳಿದ್ದು, ನಿಜವಿದ್ದರೂ ಕೂಡ, ಮಾನ್ಯ ಸಚಿವರಲ್ಲಿ ವಿನಂತಿ ಏನೆಂದರೆ ದನಗಳನ್ನು ಕಡಿಯುವಂತಹ ವಧಾಗಾರ ಏನಿದೆ ಅಲ್ಲಿ ಸಣ್ಣಸಣ್ಣ ಕರುಗಳನ್ನು ಕಡಿಯುತ್ತಾರೆ. ಬಹುಶಃ ತಮಗೆ ನಾನು ಹೇಳಬೇಕೆಂದರೆ, ಹಿಂದೆ ನಾನು ಮಂತ್ರಿಯಾಗಿದ್ದಾಗ, ಅಧಿಕಾರಿಗಳನ್ನು ಕರೆಸಿ ನಾನೇ ವಧಾಗಾರಕ್ಕೆ ಹೋದೆ. ನಿಮ್ಮವರು ಸಣ್ಣ ಸಣ್ಣ ಕರುಗಳಿಗೆ, 20 ವರ್ಷ ಆಗಿದೆ 25 ವರ್ಷ ಆಗಿದೆ ಎಂದು ಸರ್ಟಿಫಿಕೇಟ್ ಕೊಡುತ್ತಾರೆ. ಇವತ್ತು ಯಾವ ದನಗಳಿಗೂ ಕೂಡ ಸರಳವಾದ ಸಾವಿಲ್ಲ ಇವತ್ತು ರೈತರು ಮಾಡುತ್ತಾರೆ, ಆ ಸಣ್ಣ ಸಣ್ಣ ಕರುಗಳನ್ನು ಕಡಿಯುತ್ತಾರೆ. ಆ ವಧಾಗಾರದಲ್ಲಿ ಕೂಡ ಯಾವ ವಯಸ್ಸಿನ ದನಗಳನ್ನು ಕಡಿಯಬೇಕೆಂದು ಇದೆ, ಆ ರೀತಿ ಸರಿಯಾಗಿ ಮಾಡದೇ ಇದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಹಾಗೂ ಆ ಕರುಗಳನ್ನು ಮಾರಾಟ ಮಾಡದ ಹಾಗೆ ಏನು ಮಾಡುತ್ತೀರಿ ಎನ್ನುವುದನ್ನು ಕೂಡ ಹೇಳಬೇಕಾಗುತ್ತದೆ.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್: ಮಾನ್ಯ ಅಧ್ಯಕ್ಷರೆ , ಮಾನ್ಯ ಸದಸ್ಯರು ಸಣ್ಣ ಸಣ್ಣ ಕರುಗಳನ್ನು ಕಡಿಯುತ್ತಿದ್ದಾರೆ ಎಂದು ಏನು ಹೇಳುತ್ತಿದ್ದಾರೆ, ಅದರ ವಿಚಾರದಲ್ಲಿ ನಮ್ಮ ಇಲಾಖೆ ವತಿಯಿಂದ ಸಣ್ಣ ಕರುಗಳನ್ನು ಕಡಿಯಬಾರದು ಅದನ್ನುಬಹಳ ಸ್ಟ್ರಿಕ್ಟ್ ಆಗಿ ಫಾಲೋ ಮಾಡಬೇಕು ಎಂದು ಮಾಡಿ, ಇಂತಹ

ವಿಚಾರಕ್ಕೆ ನಮ್ಮ ಇಲಾಖೆಯಿಂದ ಅಲೋ ಮಾಡಬಾರದು.

ಚುಕ್ಕೆ ಗುರುತಿನ ಪ್ರಶ್ನೆ

ಕ್ರಮ.ಸಂಖ್ಯೆ : **3712**

ಸದಸ್ಯರ ಹೆಸರು : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ)

ಉತ್ತರಿಸುವವರು : ಶ್ರೀ ಪಿ.ಜಿ.ಆರ್.ಸಿಂಧ್ಯಾ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು)

ಪ್ರಶ್ನೆ	ಉತ್ತರ
ಅ. ಸರೋಜಿನಿ ಮಹಿಷಿ ವರದಿಯ ಪ್ರಮುಖವಾದ ಶಿಫಾರಸ್ಸುಗಳಾವುವು:	ಡಾ.ಸರೋಜಿನಿ ಮಹಿಷಿ ಸಮಿತಿಯ ವರದಿಯಲ್ಲಿ ಒಟ್ಟು 58 ಶಿಫಾರಸ್ಸುಗಳನ್ನು ಮಾಡಲಾಗಿದ್ದು, ಇವುಗಳಲ್ಲಿ 45 ಶಿಫಾರಸ್ಸುಗಳನ್ನು ಸರ್ಕಾರ ಅಂಗೀಕರಿಸಿತು. ಅನುಮೋದಿತ ಶೀಫಾರಸ್ಸುಗಳ ಪೈಕಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಮಾಡಲಾದ ಶಿಫಾರಸ್ಸುಗಳ ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ. ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ಸ್ಥಳೀಯರಿಗೆ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಲ್ಪಡುವ ಕೈಗಾರಿಕಾ ಘಟಕಗಳಲ್ಲಿ ಉದ್ಯೋಗಾವಕಾಶ ನೀಡುವ ಕುರಿತು ಕಾಲಕಾಲಕ್ಕೆ ಹೊರಡಿಸಲಾದ ರಾಜ್ಯ ಸರ್ಕಾರದ ಕೈಗಾರಿಕಾ ನೀತಿಯಡಿಯಲ್ಲಿ ಷರತ್ತುಗಳನ್ನು ವಿಧಿಸಲಾಗಿದೆ. ಅದರಂತೆ ಚಾಲ್ತಿಯಲ್ಲಿರುವ 2001–06 ಕೈಗಾರಿಕಾ ನೀತಿಯಲ್ಲಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ. ಕಂಡಿಕೆ 8.6(ಎ)– ಎಲ್ಲಾ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಯು ಸಾಧ್ಯವಿರುವಷ್ಟು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚುವರಿ ಉದ್ಯೋಗ ಅವಕಾಶಗಳನ್ನು